**International Journal of Academic Research and Development**
**ISSN: 2455-4197, Impact Factor: RJIF 5.22**
**www.academicsjournal.com**
**Volume 2; Issue 2; March 2017; Page No. 106-109**

# ಭವರಹಿತೆ ಧೂಪದ ಗೊಗ್ಗವ್ವೆ

**ಡಾ.ಕಾವ್ಯಶ್ರೀ. ಜಿ**
ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ

---

**Abstract**
ಹೆಣ್ಣನ್ನು ದೇವತೆಯೆಂದು ಹೊಗಳದೆ, ರಾಕ್ಷಸಿ ಎಂದು ತೆಗಳದೆ ಹೆಣ್ಣನ್ನು ಹೆಣ್ಣಾಗಿ ಕಂಡು ಗೌರವಿಸಿದವರೆಂದರೆ ಹನ್ನೆರಡನೇ ಶತಮಾನದ ಶಿವಶರಣರು ಹಾಗು ಶಿವಶರಣೆಯರು. ಇಲ್ಲಿಯವರೆಗೆ ಶಿವಶರಣೆಯರ ಒಟ್ಟು ೧೧೦೪ ವಚನಗಳು ಲಭ್ಯವಾಗಿವೆ. ಯಾವುದೇ ಒಂದು ಚಳುವಳಿಯಲ್ಲಿ ಗಂಡಸಿಗೆ ಅನುಕೂಲವನ್ನು ಮಾಡಿಕೊಡುವ ಸಮಾಜ ಹೆಣ್ಣಿಗೆ ಮಾಡಿಕೊಡುವುದಿಲ್ಲ. ಇವರು ಸ್ತ್ರೀವಾದಿಗಳು. ಅಲ್ಲದೆ ಜಾತಿ, ಮತ, ಪಂಥ ಸಂಸ್ಕೃತಿಗಳ ಮಿತಿಗಳನ್ನು ಗುರುತಿಸುತ್ತಲೆ ಸಾಧ್ಯತೆಗಳನ್ನು ತೋರಿಸಿಕೊಟ್ಟವರು. ಅಂಥವರಲ್ಲಿ ಗೊಗ್ಗವ್ವೆಯ ಸಾಧನೆ ಅಪಾರ. ಗೊಗ್ಗವ್ವೆ ತನ್ನ ಜೀವನದುದ್ದಕ್ಕೂ ಬಹು ನಿಷ್ಠೆಯಿಂದ ಭಕ್ತಿಪೂರ್ವಕವಾಗಿ ಕಾಯಕ ಮಾಡಿ ತನ್ನಿಷ್ಟಲಿಂಗನಾದ ನಾಸ್ತಿನಾಥನಲ್ಲಿ ಐಕ್ಯವಾಗಿ ಮುಕ್ತಿ ಹೊಂದುತ್ತಾಳೆ. ಈಕೆಯ ಕುರಿತು ಹುಟ್ಟಿಕೊಂಡ ಪವಾಡ ಕಥೆಗಳಲ್ಲಿ ಸಿದ್ಧನಂಜೇಶನು "ಭವರಹಿತೆ ಧೂಪದಾ ಗೊಗ್ಗವ್ವೆಯೆಂಬಾಕೆ ಶಿವಗೆ ಧೂಪವ ನೀಡಿ ಕೈಲಾಸಪದವನುಂ ಶಿವಭಕ್ತರಿಗೆ ತೋರಿ ಶಂಕರನ ಕೃಪೆ ಪಡೆದಳ್" ಎಂದು ತನ್ನ ಕೃತಿಗಳಲ್ಲಿ ಉಲ್ಲೇಖಿಸಿದ್ದಾನೆ. ಕೈಲಾಸ ಎನ್ನುವುದು ಬೇರೆಲ್ಲಿ ಇಲ್ಲ. ಅದು ಎತ್ತರವಾದ ಪರ್ವತವಲ್ಲ. ಈ ಮರ್ತ್ಯದಿಂದ ಅದು ಬಹಳ ದೂರದಲ್ಲಿಯೂ ಇಲ್ಲ 'ನಂಬಿ ಕರೆದರೆ ಓ ಎಂಬುವನು ಶಿವನು' ಎನ್ನುವಂತೆ ಶಿವಾನುಭವಿಯಾದವನಿಗೆ ಶಿವನ ಕೈಲಾಸ ಒಂದು ಕೂಗಳತೆಯಂತಿದೆ. ಅದು ತನ್ನ ಅಂತರಂಗದಲ್ಲಿಯೇ ಇದೆ. ಅದನ್ನು ಅರಿಯಬೇಕು. ಕಂಡುಕೊಳ್ಳಬೇಕು. ತನ್ನ ಅರಿವಿನ ಮನೆಯೇ ಕೈಲಾಸ ಎಂಬ ಗೊಗ್ಗವ್ವೆಯ ವಚನ ಮಾತುಗಳು ಮಾರ್ಮಿಕವಾಗಿವೆ. ಪ್ರತಿವರ್ಷ ಗೊಗ್ಗವ್ವೆಯ ಜಾತ್ರೆ ಉತ್ಸವ ನಡೆದು ಮಹಾರಾಷ್ಟ್ರದಿಂದಲೂ ಸಹ ಭಕ್ತರು ಬಂದು ಗೊಗ್ಗವ್ವೆಯ ದರ್ಶನ ಪ್ರಸಾದ ಪಡೆದುಕೊಂಡು ಧನ್ಯರಾಗುತ್ತಾರೆ. ಹೆಣ್ಣುಮಕ್ಕಳಿಗಂತೂ ಗೊಗ್ಗವ್ವೆಯ ಮೇಲೆ ವಿಶೇಷ ಭಕ್ತಿ. ಜನಪದರು ಬೀದರ ಜಿಲ್ಲೆ ಮತ್ತು ಮಹಾರಾಷ್ಟ್ರಗಳಲ್ಲಿ ಗೊಗ್ಗವ್ವೆಯ ಕುರಿತಾಗಿ ಭಜನೆ ಹಾಡುಗಳನ್ನು ಕಟ್ಟಿ ಹಾಡಿರುವುದೂ ಇದೆ.

**Keywords:** ಅನಲಕೊಂಡ, ದೀವಟಿಗಿ, ಪಾಚತೊಲಿಯ ಚೌಕ, ಧೂಪದ ಆರತಿ, ಭವರಹಿತೆ

---

## Introduction

ವೀರಶೈವ ಧರ್ಮ ಸಿದ್ಧಾಂತದಲ್ಲಿ ಶರಣ ಸತಿ ಲಿಂಗಪತಿ ಎಂಬ ತತ್ವವನ್ನು ಶಿವಶರಣರೆಲ್ಲರೂ ಒಪ್ಪಿ ಅನುಸರಿಸಿದ್ದಾರೆ. ಹೆಣ್ಣು ಮಾಯೆಯಲ್ಲ; ಅಗಾಧ ಶಕ್ತಿ ಎಂದು ಶರಣರು ತಿಳಿಸಿದರು. ಇವರು ನಿರ್ಮಿಸಿದ ಅಂದಿನ ಪರಿಸರದಿಂದ ಪ್ರಭಾವ ಪ್ರೇರಣೆ ಪಡೆದು, ತಮಗೆ ಸಮಾಜವು ಹಾಕಿದ್ದ ಬಂಧನಗಳೆಲ್ಲವನ್ನು ಮೀರಿ ಸ್ತ್ರೀಯರು ಧೈರ್ಯವಂತರಾಗಿ, ಸ್ವತಂತ್ರರಾಗಿ, ಅನುಭಾವಿಗಳಾಗಿ ತಮ್ಮ ಮನಸ್ಸಿನ ಭಾವನೆ, ಚಿಂತನೆ, ಸಂವೇದನೆಗಳನ್ನೆಲ್ಲ ವಚನಗಳ ಮೂಲಕ ಅಭಿವ್ಯಕ್ತ ಮಾಡಿದ್ದಾರೆ. ಅನುಭವ ಮಂಟಪವೆಂಬ ಮುಕ್ತ ವೇದಿಕೆಯಲ್ಲಿ ಅನೇಕ ಅಕ್ಷರಸ್ತ-ಅನಕ್ಷರಸ್ತ ಶರಣೆಯರು ಮಾತಾಡಿದ್ದಾರೆ, ಪ್ರತಿಭಟಿಸಿದ್ದಾರೆ. ಶರಣೆಯರು ಅಧ್ಯಾತ್ಮಿಕ ಕ್ಷೇತ್ರದಲ್ಲಿ ಪಾಲ್ಗೊಂಡು, ಸಾಧನೆಗೈದು ವಚನಗಳ ರಚನೆಯಲ್ಲಿ ತೊಡಗಿ ಪರಂಪರೆಯನ್ನು ಸೃಷ್ಟಿಸಿದ್ದು ಸ್ತ್ರೀಕುಲಕ್ಕೆ ಒಂದು ಹೆಮ್ಮೆಯ ವಿಷಯವಾಗಿದೆ. ಅಡಿಗೆ ಮನೆಯಿಂದ ಅಧ್ಯಾತ್ಮಕ್ಕೆ ಧಾವಿಸಿದ್ದು ಒಂದು ದೊಡ್ಡ ಸಾಧನೆಯೇ ಸರಿ. ಬಸವಾದಿ ಪ್ರಮಥರು ಸೃಷ್ಟಿಸಿದ ಹೊಸ ಸಮಾಜ ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿ ಕೊಟ್ಟಿತ್ತು. ಅಲ್ಲಿ ಮಹಿಳೆಯರು, ಶೂದ್ರರು, ಕೆಳವರ್ಗದವರು ಹೀಗೆ ಎಲ್ಲರಿಗೂ ಅವಕಾಶವನ್ನು ನೀಡಲಾಗಿತ್ತು. ಎಲ್ಲರ ವಿಚಾರಗಳಿಗೂ, ಅನಿಸಿಕೆ ಅಭಿಪ್ರಾಯಗಳಿಗೆ ಮಾನ್ಯತೆ ಮಾಡಲಾಯಿತು. ಹೆಣ್ಣು ಮಾಯೆಯೆಂಬರು ಮಾಯೆಯಲ್ಲ ಎಂಬ ಅಲ್ಲಮನ ಮಾತನ್ನು ಅನುಭವ ಮಂಟಪ ಸತ್ಯವಾಗಿಸಿತು. ಎಲ್ಲ ಸ್ತರದ ಹೆಣ್ಣು ಮಕ್ಕಳಿಗೆ ಮುಕ್ತವಾದ, ಪುರುಷ ಸಮಾನವಾದ ವೇದಿಕೆ ಲಭಿಸಿತು. ಆ ಮೂಲಕವಾಗಿ ಶರಣೆಯರು ವಚನಗಳನ್ನು ರಚಿಸಿ ಸಾಹಿತ್ಯದ ಇತಿಹಾಸದಲ್ಲಿ ಚಿರಸ್ಮರಣೀಯರಾದರು.

ಶಿವಶರಣೆಯರ ಒಟ್ಟು ೧೧೦೪ ವಚನಗಳು ಇಲ್ಲಿಯವರೆಗೆ ಲಭ್ಯವಾಗಿವೆ. ಯಾವುದೇ ಒಂದು ಚಳುವಳಿಯಲ್ಲಿ ಗಂಡಸಿಗೆ ಅನುಕೂಲವನ್ನು ಮಾಡಿಕೊಡುವ ಸಮಾಜ ಹೆಣ್ಣಿಗೆ ಮಾಡಿಕೊಡುವುದಿಲ್ಲ. ಹೆಣ್ಣನ್ನು ದೇವತೆಯೆಂದು ಹೊಗಳದೆ, ರಾಕ್ಷಸಿ ಎಂದು ತೆಗಳದೆ ಹೆಣ್ಣನ್ನು ಹೆಣ್ಣಾಗಿ ಕಂಡು ಗೌರವಿಸಿದವರೆಂದರೆ ಹನ್ನೆರಡನೇ ಶತಮಾನದ ಶಿವಶರಣರು. ಇವರು ಸ್ತ್ರೀವಾದಿಗಳು. ಅಲ್ಲದೆ ಜಾತಿ, ಮತ, ಪಂಥ ಸಂಸ್ಕೃತಿಗಳ ಮಿತಿಗಳನ್ನು ಗುರುತಿಸುತ್ತಲೆ ಸಾಧ್ಯತೆಗಳನ್ನು ತೋರಿಸಿಕೊಟ್ಟವರು. ಇಂಥ ವಿಶಿಷ್ಟ ವೇದಿಕೆಯಲ್ಲಿ ವಿವಿಧ ವರ್ಗದ ಮಹಿಳೆಯರು ಭಾಗಿಯಾಗಿ ತಮ್ಮ ಭಾವನೆಗಳಿಗೆ ಇಂಬುಕೊಟ್ಟರು. ಇವರೆಲ್ಲ ಚಳುವಳಿಗೆ ಪೂರಕವಾಗಿ ನಿಂತರು. ತಮ್ಮ ಆಳವಾದ ವೈಚಾರಿಕ ಚಿಂತನೆಗಳಿಂದ, ಗಟ್ಟಿಯಾದ ನಿರ್ಧಾರಗಳಿಂದ ನಿಷ್ಠೆ, ಆಚರಣೆ ಬದ್ಧತೆಯಿಂದ ಆತ್ಮ ಸಾಕ್ಷಿಯೊಂದಿಗೆ ಶರಣ ಚಳುವಳಿಗೆ ಒಂದು ಹೊಸ ಪಥವನ್ನು ತೋರಿಸಿದರು.

ಸೈದ್ಧಾಂತಿಕ ಚರ್ಚೆಯಲ್ಲಿ ಮುಕ್ತಾಯಕ್ಕ, ಅನುಭಾವದೆತ್ತರಕ್ಕೆ ಅಕ್ಕ ಮಹಾದೇವಿ, ಆಚಾರ ವ್ರತನಿಷ್ಠೆಗೆ ಅಕ್ಕಮ್ಮ, ಕಾಯಕ ತತ್ವಕ್ಕೆ ಆಯ್ದಕ್ಕಿ ಲಕ್ಕಮ್ಮ, ಆಹಾರ ಪದ್ಧತಿಯನ್ನು ಪ್ರಶ್ನಿಸುವ ಕಾಳವ್ವೆ, ಅಧ್ಯಾತ್ಮದ ಬೋಧನೆಗೈಯುವ ಲಿಂಗಮ್ಮ, ಶಿವಭಕ್ತೆ ಗೊಗ್ಗವ್ವೆ, ಹೀಗೆ ಪ್ರತಿ

ಶರಣೆಯಲ್ಲಿಯೂ ಒಂದು ವಿಶಿಷ್ಠತೆ ಇದೆ. ಇವರ ಆಲೋಚನೆಗಳೆಲ್ಲ ಸುಂದರವಾದ ಬದುಕಿಗೆ ಅಣಿಮುತ್ತಿನಂತಿವೆ. ಕೆಲವಂತೂ ಪ್ರಸ್ತುತ ಸಂದರ್ಭದಲ್ಲಿಯೂ ಸೂಕ್ತ ಎನಿಸಿವೆ. ಇವರೆಲ್ಲ ತಮ್ಮ ಪೂರ್ವಾಶ್ರಯದ ಜಾತಿ–ಭೇದ, ಅಂತರ–ಅಂತಸ್ತುಗಳನ್ನು ಮರೆತು ಶರಣರು ಸೃಷ್ಟಿಸಿದ ಭೇದರಹಿತ ಸರ್ವಸಮಾನ ಮಾನವಧರ್ಮದ ವೇದಿಕೆಯಲ್ಲಿ ಒಂದಾಗಿ ಕೌಟುಂಬಿಕ, ಧಾರ್ಮಿಕ, ಸಾಮಾಜಿಕ, ಅಧ್ಯಾತ್ಮಿಕ, ಅನುಭಾವಿಕ ಹಂತಗಳಲ್ಲಿ ತಮ್ಮ ಮಹತ್ವದ ಆಲೋಚನೆಗಳನ್ನು ಪರಸ್ಪರ ಹಂಚಿಕೊಂಡು ಗೌರವಿಸಿ ಒಂದು ಹೊಸ ಸ್ತ್ರೀಲೋಕವನ್ನು ನಮಗೆ ನೀಡಿದ್ದಾರೆ. ತಮ್ಮ ಚಿಂತನೆಗಳನ್ನು ಬರೀ ವಿಚಾರಕ್ಕಷ್ಟೇ ಸೀಮಿತಗೊಳಿಸದೆ ಅದನ್ನು ಅರ್ಥಪೂರ್ಣವಾಗಿ ಆಚರಣೆಯಲ್ಲಿ ತಂದು ಸಾಕಾರಗೊಳಿಸಿದ್ದಾರೆ. ಶರಣೆಯರೆಲ್ಲರೂ ಕಾಯಕ ಜೀವಿಗಳು, ಸತ್ಯಪ್ರಿಯರು. ಸ್ವಾಭಿಮಾನವನ್ನು ಬಯಸಿದ ಧೈರ್ಯವಂತೆಯರು; ಸಾಧ್ವಿಗಳು, ಶೀಲಸಂಪನ್ನೆಯರು. ಧಾರ್ಮಿಕತೆಯೊಂದಿಗೆ ಇವರ ವಚನಗಳಲ್ಲಿ ಸಾಮಾಜಿಕ ಅಂಶಗಳು ಇವೆ. ಸಮಾಜ ಸುಧಾರಣೆಯತ್ತ ಇವರ ಉದ್ದೇಶ. ಆರ್ಥಿಕ ಸಮಾನತೆ, ನೀತಿಯುಕ್ತ ಬದುಕು, ಶುದ್ಧ ಕಾಯಕ, ದಾಸೋಹ, ಪ್ರಾಮಾಣಿಕ ಬದುಕು ನಡೆಸಿ ವೈಯಕ್ತಿಕ ಹಾಗೂ ಸಾಮಾಜಿಕ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಸಲಹೆ ನೀಡಿದ್ದಾರೆ. ಇದು ಇಂದಿಗೂ ಅವಶ್ಯಕವೆನಿಸಿದೆ.

**Review of Literature**

ಶರಣರ ದಟ್ಟವಾದ ಪ್ರಭಾವ ಪ್ರೇರಣೆಯಲ್ಲಿ ಬೆಳೆದು ಬಂದರೂ ಶರಣೆಯರು ತಮ್ಮ ಸ್ವಂತಿಕೆಯನ್ನು ಮೆರೆದಿದ್ದಾರೆ. ವಚನಗಳ ವಿನ್ಯಾಸ, ಭಾಷೆ, ಉಪಮೆ, ಅಲಂಕಾರ, ವರ್ಣನೆಗಳಲ್ಲಿ, ಶೈಲಿ ತಂತ್ರಗಳಲ್ಲಿ ನಾವೀನ್ಯತೆ ಇದ್ದು ಹೆಣ್ತನದ ಸ್ಪರ್ಶವಿದೆ; ಸೂಕ್ಷ್ಮತೆಯಿದೆ. ಶರಣ ಆಂದೋಲನದಲ್ಲಿ ಸಕ್ರಿಯಾತ್ಮಕವಾಗಿ ತೊಡಗಿ ತಮ್ಮದೇ ಆದ ಒಂದು ವಿಭಿನ್ನ ಅದ್ಭುತ ಕೊಡುಗೆ ನೀಡಿದ ಶಿವಶರಣೆ ಭವರಹಿತೆ ಗೊಗ್ಗವ್ವೆ, ಗೊಗ್ಗವ್ವೆ ಅಥವಾ ಧೂಪದ ಗೊಗ್ಗವ್ವೆ ಎಂದೇ ಈಕೆ ಪ್ರಸಿದ್ಧಳಾಗಿರುವಳು. ಈಕೆ ಶಿವಭಕ್ತರಿಗೆ ಧೂಪ ನೀಡುವ ಕಾಯಕದಲ್ಲಿದ್ದವಳು. ಗೊಗ್ಗವ್ವೆಗೆ ಸಂಬಂಧಿಸಿದ ಕೆಲವು ವಿಷಯಗಳು ಪ್ರಾಚೀನ ಕಾವ್ಯಗಳಲ್ಲಿವೆ. 'ಭೈರವೇಶ್ವರ ಕಾವ್ಯ'ದ ಕಥಾಮಣಿ ಸೂತ್ರ ರತ್ನಾಕರ ಹಾಗು 'ಗುರುರಾಜ ಚಾರಿತ್ರ್ಯ' ಮೊದಲಾದವುಗಳಲ್ಲಿ ಉಲ್ಲೇಖಗೊಂಡಿದೆ. ಆಧುನಿಕ ಬರಹಗಾರರು ಕೂಡ ಗೊಗ್ಗವ್ವೆಯ ಕುರಿತಾಗಿ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ಈಕೆಯ ಬಗ್ಗೆ ಹೊಸ ವಿಷಯಗಳ ಹುಡುಕಾಟವೂ ನಡೆದೇ ಇದೆ. ಎಂ.ಎಸ್ ಹಿರೇಮಠರು ಶಿವಶರಣೆ ಗೊಗ್ಗವ್ವೆ ಎಂಬ ಸಂಶೋಧನಾ ಅಧ್ಯಯನ ಕೈಗೊಂಡು ಈಗಲೂ ಜನರಿಂದ ಪೂಜೆಗೊಳ್ಳುತ್ತಿರುವ ಬಗ್ಗೆ ತಿಳಿಸಿದ್ದಾರೆ. ಚನ್ನಕ್ಕ ಪಾವಟೆಯವರು 'ವಚನ ಸನ್ನಿಧಿ' ಕೃತಿಯಲ್ಲಿ ಒಂದಿಷ್ಟು ಮಾಹಿತಿ ನೀಡಿದ್ದಾರೆ. ವಿವಿಧ ಸಂಶೋಧಕರು ವಚನಕಾರರ ಕುರಿತಾಗಿ ಸಂಶೋಧನೆಯಲ್ಲಿ ತೊಡಗಿಕೊಂಡಿದ್ದಾರೆ. ಡಾ.ಜಿ.ಕಾವ್ಯಶ್ರೀಯವರು ತಮ್ಮ 'ವಚನಕಾರ್ತಿಯರು ಮತ್ತು ವೈಚಾರಿಕ ಪ್ರಜ್ಞೆ' ಕೃತಿಯಲ್ಲಿ ಮಾಹಿತಿ ನೀಡಿದ್ದಾರೆ.

ಗೊಗ್ಗವ್ವೆಯ ಸ್ಥಳ ಕೇರಳದ ಆವಲೂರು. ಶಿವಭಕ್ತರ ಉದರದಲ್ಲಿ ಜನಿಸಿದ ಈಕೆ ಬಾಲ್ಯಾವಸ್ಥೆಯಿಂದಲೆ ಶಿವಭಕ್ತಿಯನ್ನು ಮೈಗೂಡಿಸಿಕೊಂಡಿದ್ದಳು. ಯವ್ವನಾವಸ್ಥೆಗೆ ಬಂದಾಗ ಇವಳ ತಂದೆ–ತಾಯಿ ವಿವಾಹ ಮಾಡಬೇಕೆಂದು ವಿಚಾರಿಸಿದಾಗ, ಇವಳು ಮನೆಯಿಂದ ಓಡಿಹೋಗಿ ಶಿವಾಲಯದಲ್ಲಿ ಅಡಗಿಕೊಂಡಿದ್ದಳು. ಇದರಿಂದ ತಂದೆ ತಾಯಂದಿರು ಇವಳ ಮನದಿಚ್ಛೆಯಂತೆ ಇರಲು ಬಿಡುತ್ತಾರೆ. ಈಕೆಗೆ ಯಾವುದೇ ಒತ್ತಾಯ ಮಾಡುವುದಿಲ್ಲ. ತರುವಾಯ ಶಿವಭಕ್ತಿಯಲ್ಲಿ ತನ್ನ ಮನವನ್ನು ಕೇಂದ್ರೀಕರಿಸಿದ ಗೊಗ್ಗವ್ವೆ ಧೂಪ ಅರ್ಪಿಸುವ ಕಾಯಕವನ್ನು ಕೈಗೊಳ್ಳುತ್ತಾಳೆ. ಅಕ್ಕ ಮಹಾದೇವಿ, ಬೊಂತಾದೇವಿಯಂತೆ ಈಕೆಯೂ ವೀರ ವಿರಾಗಿಣಿ. ಇವಳ ಕಾಲ ೧೧೬೦. ಅಂಕಿತ 'ನಾಸ್ತಿನಾಥಾ' ಎಂದು. ವಚನಗಳ ಸಂಖ್ಯೆ ಆರು. ಶರಣ ಸತಿ ಲಿಂಗಪತಿ ಎಂಬ ಭಾವನೆಯನ್ನು ತೋರಿದ ಈಕೆ ಶಿವನನ್ನೇ ತನ್ನ ಪತಿಯೆಂದು ಬಗೆದು ಭಕ್ತಿ ಮಾಡಿದಳು.

ಈಕೆಯ ಬಗ್ಗೆ ಒಂದು ಪವಾಡ ಕಥೆಯಿದೆ. ಒಮ್ಮೆ ಶಿವ ಇವಳ ನಿಷ್ಠೆ ಪರೀಕ್ಷಿಸಲು ಸ್ಫುರದ್ರೂಪಿ ಯುವಕನ ವೇಷದಲ್ಲಿ ಕಾಣಿಸಿಕೊಂಡು, ತನ್ನನ್ನು ಮದುವೆಯಾಗಲು ಗೊಗ್ಗವ್ವೆಗೆ ಒತ್ತಾಯಿಸುತ್ತಾನೆ. ಆಗ ಆಕೆ ಅದಕ್ಕೊಪ್ಪದೆ ತನ್ನ ನಿಷ್ಠೆಯನ್ನು ಮೆರೆಯಲು, ಶಿವನು ಮೆಚ್ಚಿ ಅವಳಿಗೆ ವೀರಶೈವ ಉಪದೇಶ ಮಾಡಿ, ಶಿವಭಕ್ತರಿಗೆ ಧೂಪವನ್ನರ್ಪಿಸುತ್ತ ಜೀವನ ಸಾಗಿಸು ಎಂದು ಹೇಳುತ್ತಾನೆ. ಅಂದಿನಿಂದ ಆಕೆ ಧೂಪದ ಕಾಯಕವನ್ನು ಮಾಡುತ್ತ ಶಿವನಲ್ಲಿ ತಲ್ಲೀನಳಾಗುತ್ತಾಳೆ. ಒಮ್ಮೆ ಕೇರಳದ ಕೂಡಗಲೂರ ದೊರೆ ಚೇರಮರಾಯ ಕೈಲಾಸದ ದಾರಿ ಹುಡುಕುತ್ತ ಹೊರಟಾಗ, ಅವನಿಗೆ ಧೂಪದ ಹೊಗೆಯ ಮೂಲಕ ದಾರಿ ತೋರಿಸುತ್ತಾಳೆ. ಈ ರೀತಿಯಾಗಿ ಗೊಗ್ಗವ್ವೆ ತನ್ನ ಜೀವನದುದ್ದಕ್ಕೂ ಬಹು ನಿಷ್ಠೆಯಿಂದ ಭಕ್ತಿಪೂರ್ವಕವಾಗಿ ಕಾಯಕ ಮಾಡಿ ತನ್ನಿಷ್ಟಲಿಂಗನಾದ ನಾಸ್ತಿನಾಥನಲ್ಲಿ ಐಕ್ಯವಾಗಿ ಮುಕ್ತಿ ಹೊಂದುತ್ತಾಳೆ. ಈಕೆಯ ಕುರಿತು ಹುಟ್ಟಿಕೊಂಡ ಪವಾಡ ಕಥೆಗಳಲ್ಲಿ ಸಿದ್ಧನಂಜೇಶನು "ಭವರಹಿತೆ ಧೂಪದಾ ಗೊಗ್ಗವ್ವೆಯೆಂಬಾಕೆ ಶಿವಗೆ ಧೂಪವ ನೀಡಿ ಕೈಲಾಸಪದವನುಂ ಶಿವಭಕ್ತರಿಗೆ ತೋರಿ ಶಂಕರನ ಕೃಪೆ ಪಡೆದಳ್" ಎಂದು ತನ್ನ ಕೃತಿಗಳಲ್ಲಿ ಉಲ್ಲೇಖಿಸಿದ್ದಾನೆ. ಪರಶಿವನು ನಿಜಭಕ್ತಿಗೆ ಸದಾ ಒಲಿಯುವನು. ಆತ ಭಕ್ತಿ ಕಂಪಿತ. ಅವನ ಆರಾಧನೆಗೆ ತನು ಮನ ಧನಗಳ ತ್ರಿಕರಣ ಸೇವೆ ಅಗತ್ಯ. ಹೀಗೆ ಶರಣದರ್ಶನದಲ್ಲಿ ಆತ್ಮ ಸಾಕ್ಷಾತ್ಕಾರದ ದಾರಿಯೆಂದರೆ ಸತ್ಯ ಶುದ್ಧವಾದ ಕಾಯಕ. ಭಕ್ತಿಯೇ ಕಾಯಕವಾಗಿದೆ.

ಸಾಧಕನ ಅಂತರಂಗ ಬಹಿರಂಗ ಶುದ್ಧಿಯ ಸಂಕೇತವೇ ಕಾಯಕ. ಅಂಥ ಪರಿಶುದ್ಧವಾದ ಕಾಯಕ ಸಮಾಜಕ್ಕೆ ವಿನಿಯೋಗವಾಗಬೇಕು. ಸಮಾಜಮುಖಿಯಾಗಬೇಕು ಎಂಬ ನಿಲುವು ಶಿವಶರಣ ಶರಣೆಯರದು. ಇಂಥ ಕಾಯಕದ ಸೇವೆಯಲ್ಲಿ ಪರಮಾತ್ಮನಿಗೆ ನಿತ್ಯ ಧೂಪದ ಅರ್ಪಣೆ ಗೊಗ್ಗವ್ವೆಯಿಂದ ನೆರವೇರುತ್ತಿತ್ತು. 'ಚೋಳದೇಶದ ಕಲಿಯಾರ್, ಉತ್ತರದೇಶದ ಓಹಿಲಯ್ಯ ಮತ್ತು ಗುಪ್ತ ಮಂಚಣ್ಣ, ಮಾಚಯ್ಯ ಶರಣರು ಸಹ ಧೂಪದ ಕಾಯಕವನ್ನು ಕೈಗೊಂಡಿದ್ದರು. 'ಭೈರವೇಶ್ವರ ಕಾವ್ಯ' ದ ಕಥಾಮಣಿ ಸೂತ್ರ ರತ್ನಾಕರ, ಶಾಂತಲಿಂಗ ದೇಶಿಕನ ಕೃತಿಯಲ್ಲಿ ಇವರ ಹೆಸರುಗಳು ಉಲ್ಲೇಖಿತವಾಗಿವೆ. ಹೀಗೆ ಧೂಪದ ಸೇವೆಯಲ್ಲಿ ಆತ್ಮ ಸಾಕ್ಷಾತ್ಕಾರದ ಸಾಧನೆಗೈದವಳು ಗೊಗ್ಗವ್ವೆ. ಇದು ಇವಳ ವಿಶೇಷತೆಯೆನಿಸುತ್ತದೆ. ಇವಳ ಬಗ್ಗೆ ಜನಪದರು ತಮ್ಮ ಜಾನಪದೀಯ ಆಚರಣೆಯಲ್ಲಿ ಜೀವಂತವಾಗಿರಿಸಿದ್ದು ಗಮನಾರ್ಹ. ಆದರೆ ಕನ್ನಡ ಶಾಸನಗಳಲ್ಲಿ ಇವಳ ಪ್ರಸ್ತಾಪವಿಲ್ಲ. ತಮಿಳುನಾಡಿನ ಅರವತ್ಮೂರು ಪುರಾತನರ ಅಚಲವಾದ ಭಕ್ತಿ ಆಚರಣೆಗಳನ್ನು ಪಾಲಿಸಿಕೊಂಡು ಬಂದ ಶರಣೆಯಿವಳು. ಹನ್ನೆರಡನೆ ಶತಮಾನದ ಎಲ್ಲ ಶರಣೆಯರಂತೆ ಈಕೆಯೂ ಕೂಡ ಅಧ್ಯಾತ್ಮ ಸಾಧನೆಗೆ ಹೆಣ್ತನ ಎಂದೂ ಅಡ್ಡಿಯಾಗದು ಎಂಬುದನ್ನು ತೋರಿಸಿಕೊಟ್ಟಳು.

ಸಮಾಜದ ಅನಿಷ್ಟ ಸಂಪ್ರದಾಯಗಳನ್ನು ಕಿತ್ತು ಹಾಕುವ ಮತ್ತು ವ್ಯಕ್ತಿ ಸ್ವಾತಂತ್ರ್ಯ, ಆಯ್ಕೆ ಸ್ವಾತಂತ್ರ್ಯವನ್ನು ಮೌಲ್ಯವಾಗಿಸಿಕೊಂಡು ಸ್ವಾಭಿಮಾನದ ಬದುಕನ್ನು ಬಾಳಿದವಳು ಈಕೆ. ಇವಳ ಉಪಾಸನೆ, ನಿಷ್ಠೆ, ಕಾಯಕ ಮನೋಭಾವಗಳು ವಚನಗಳಲ್ಲಿ ಸ್ಫುಟಗೊಂಡಿವೆ.

> ಅನಲಕೊಂಡ ಭೋಗಕ್ಕೆ ಪರಿಪ್ರಕಾರವುಂಟೆ?
> ಶರಧಿಕೊಂಡ ಸಾಗರಕ್ಕೆ ಕುರುಹಿನ ತಲೆಯೆ?
> ಲಿಂಗಮುಟ್ಟಿದ ಅಂಗಕ್ಕೆ ಮತ್ತೆ ಪುಣ್ಯವುಂಟೆ?
> ಹುಸಿ, ನಾಸ್ತಿನಾಥಾ.[1]

ಕ್ರಿಯೆ, ಜ್ಞಾನ, ಲಿಂಗದ ಸಾಮರಸ್ಯ ಇವು ಲೌಕಿಕವನ್ನು ಮೀರಿ ಅಲೌಕಿಕದಲ್ಲಿ ನಿಂತವು. ಲಿಂಗ ಮುಟ್ಟಿದ ಅಂಗ ಪುಣ್ಯ ಪಾಪಗಳ ಸೀಮೆಯನ್ನು ದಾಟಿ ನಿಲ್ಲಬೇಕು ಎಂಬ ತಾತ್ಪರ್ಯವನ್ನು ಈ ವಚನದಲ್ಲಿ ಕಾಣಬಹುದು. ನೇಮ ಆಚರಣೆಗಳು ಅಂತರಂಗದ ಸಾಕ್ಷಾತ್ಕಾರಕ್ಕೆ ಪೂರಕಗೊಂಡ ಸಾಧನವಾಗಬೇಕು. ಚರಿತ್ರೆಯಲ್ಲಿ ಕಂಡುಬರುವ ಗೊಗ್ಗವ್ವೆಯ ಪವಾಡ ಕಥೆಗಳನ್ನೆಲ್ಲ ನಾವು ವಾಸ್ತವಿಕ ದೃಷ್ಟಿಯಿಂದ ನೋಡಬೇಕು. ತನ್ನ ಶಿವ ಭಕ್ತಿ ಧ್ಯಾನದ ಮಾರ್ಗವಾಗಿ ಅರ್ಪಿಸುವ ಹೊಗೆ ನೇರವಾಗಿ ಮೇಲೇರುವಂತೆ ಈ ಆತ್ಮ ಆ ಶಿವನನ್ನು ಸೇರಿ ಒಂದಾಗಬೇಕು ಎಂಬ ಶಿವಾನುಭವದ ದೃಷ್ಟಿ ಇವಳಲ್ಲಿದೆ.

ಕೈಲಾಸ ಎನ್ನುವುದು ಬೇರೆಲ್ಲಿ ಇಲ್ಲ. ಅದು ಎತ್ತರವಾದ ಪರ್ವತವಲ್ಲ. ಈ ಮರ್ತ್ಯದಿಂದ ಅದು ಬಹಳ ದೂರದಲ್ಲಿಯೂ ಇಲ್ಲ 'ನಂಬಿ ಕರೆದರೆ ಓ ಎಂಬುವನು ಶಿವನು' ಎನ್ನುವಂತೆ ಶಿವಾನುಭವಿಯಾದವನಿಗೆ ಶಿವನ ಕೈಲಾಸ ಒಂದು ಕೂಗಳತೆಯಂತಿದೆ. ಅದು ತನ್ನ ಅಂತರಂಗದಲ್ಲಿಯೇ ಇದೆ. ಅದನ್ನು ಅರಿಯಬೇಕು. ಕಂಡುಕೊಳ್ಳಬೇಕು. ತನ್ನ ಅರಿವಿನ ಮನೆಯೇ ಕೈಲಾಸ ಎಂಬ ಗೊಗ್ಗವ್ವೆಯ ವಚನ ಮಾತುಗಳು ಮಾರ್ಮಿಕವಾಗಿವೆ.

> ಭಕ್ತರು ಜಂಗಮದಲ್ಲಿ ಕಟ್ಟಿ ಹೊರಲೇಕೆ?
> ಧೂಪದ ಹೊಗೆ ಎತ್ತ ಹೋದಡೂ ಸರಿ.
> ಇದು ಸತ್ಯವೆಂದೆ ನಾಸ್ತಿನಾಥಾ.

ಭಯ, ಭಕ್ತಿ, ನಿಷ್ಠೆ, ಏಕಾಗ್ರತೆಯಿಂದ ಕೂಡಿದ ಸಾಲುಗಳಿವು. ಇವೆಲ್ಲವುಗಳಿಂದ ಪರಮಾತ್ಮನಿಗೆ ಸಮರ್ಪಿಸುವ ಧೂಪ ಎತ್ತ ಹೋದರೂ ಅದು ಪರಮಾತ್ಮನತ್ತಲೇ ಎಂಬುದು ಶಿವನ ದರ್ಶನ ಮಾಡಿಸಿದಂತೆ, ಏಕಾಗ್ರತೆ ನೇರವಾಗಿ ಶಿವನನ್ನು ತಲುಪುತ್ತದೆ ಎಂಬ ಧ್ವನಿ ಇಲ್ಲಿದೆ. ಧೂಪದ ಹೊಗೆ ಎತ್ತ ಹೋದರೂ ಶಿವನೇ ನಿನ್ನತ್ತಲೇ ಎಂಭ ದೃಢ ನಂಬಿಕೆಯೇ ಸತ್ಯ ಶುದ್ಧವಾದ ಕಾಯಕತತ್ವ. ಪ್ರತಿಯೊಂದು ಅಣು ಅಣುವಿನಲ್ಲಿಯೂ ಪರಮಾತ್ಮನ ಅಂಶವಿದೆ. ಆತ್ಮನ ಪರಿಶುದ್ಧತೆಯೆ ಪರಮಾತ್ಮನಲ್ಲಿ ಬೆರೆಯುವ, ಸೇರುವ ಮಾರ್ಗ ಎಂಬುದು ಇಲ್ಲಿ ಸೂಚ್ಯವಾಗಿದೆ.

> ಮಾರುತನಲ್ಲಿ ಬೆರೆದ ಗಂಧದಂತೆ,
> ಸೂರುತನಲ್ಲಿ ಬೆರೆದ ಸುಖದಂತೆ,
> ಮಚ್ಚಿದಲ್ಲಿ ಕೊಡುವ ಉಚಿತದಂತೆ
> ಭಕ್ತರಿಗೆ ಹಾದಿ ಎಂದೆ ನಾಸ್ತಿನಾಥಾ

ಇಲ್ಲಿ ಆತ್ಮ ಪರಮಾತ್ಮಗಳ ಸುಂದರ ಸಾಮರಸ್ಯ ಬಿಂಬಿತವಾಗಿದೆ. ಕೃಷಿ ಸಂಸ್ಕೃತಿ ಪ್ರಧಾನವಾದ ನಮ್ಮ ರಾಜ್ಯದಲ್ಲಿ ಅನೇಕ ವಿಭಿನ್ನ ದೇವತೆಗಳಿವೆ. ಅವುಗಳಲ್ಲಿ ಜೇಷ್ಠ ಬಹುಳ ಅಮವಾಸೆಯ ಅರಳೆಲೆ ಬಸವ, ಭಾದ್ರಪದ ಆಶ್ವೀಜ ಕಾಲದ ಗುರ್ಜಿ, ಆಷಾಢಮಾಸದ ಗುಳ್ಳವ್ವ ಇತ್ಯಾದಿ. ಇವುಗಳಲ್ಲಿ ಜನಪದರು ಗುಳ್ಳವ್ವನನ್ನು ಪೂಜಿಸುವುದುಂಟು. ಶ್ರಾವಣ ಮಾಸದ ನಾಲ್ಕು ಮಂಗಳವಾರ ಉತ್ತರಕರ್ನಾಟಕದಲ್ಲಿ ಆರಾಧಿಸುವ ಪರಿಪಾಠವಿದೆ. ಹೆಣ್ಣುಮಗಳ ಮಣ್ಣಿನ ವಿಗ್ರಹವೊಂದನ್ನು ಮಾಡಿ ಅದನ್ನು ಸೀರೆ ಆಭರಣಗಳಿಂದ ಅಲಂಕಾರ ಮಾಡಿ ಅವಳ ಕೈಯಲ್ಲಿ ಆರತಿಯನ್ನೋ, ಧೂಪವನ್ನೋ (ಧೂಪದ ಆರತಿ) ಕೊಟ್ಟು ಕೂಡಿಸುವ ವಾಡಿಕೆಯಿದೆ. ಇದು ಪ್ರಾಚೀನ ಶರಣೆ ಗೊಗ್ಗವ್ವೆಯ ಇರುವಿಕೆಯನ್ನು ಸೂಚಿಸುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ ಕುರೂಪಿಯಾದ ಹೆಣ್ಣನ್ನು ಗುಳ್ಳವ್ವನ ಮುಂದಿನ ಗೊಗ್ಗವ್ವ ಆಗ್ಯಾಳ ಎಂದು ಕರೆಯುವ ರೂಢಿಯಿದೆ. ಇದು ಗುಳ್ಳವ್ವನ ಜೊತೆಯಿರುವ ಗೊಗ್ಗವ್ವೆಯನ್ನು ನೆನಪಿಸುತ್ತದೆ. ಶ್ರೀ ಗದ್ದಗಿಮಠರು ತಮ್ಮ 'ಕನ್ನಡ ಜಾನಪದ ಗೀತೆಗಳು' ಸಂಶೋಧನಾ ಕೃತಿಯಲ್ಲಿ "ವೀರಶೈವರಲ್ಲಿ ಗೊಗ್ಗವ್ವೆ ಎಂಬ ಶರಣೆ ಆಗಿ ಹೋಗಿದ್ದಾಳೆ. ಅವಳ ನೆನಪಿಗಾಗಿ ಗುಳ್ಳವ್ವನ ಮುಂದಿನ ದೀಪದ ಗೊಗ್ಗಿಯು (ದೀವಟಿಗಿ) ಮನುಷ್ಯಾಕೃತಿ ತಾಳಿದ ಮೇಲೆ ಗೊಗ್ಗವ್ವೆ ದೈವವಾಗಿರಬಹುದೇ?" ಎಂಬಂಥ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿರುವರು.[2] ಹೀಗೆ ನಮ್ಮ ಜನಪದರು ತಮ್ಮ ಭಕ್ತಿ ಪರಾಕಾಷ್ಠೆಯಲ್ಲಿ ಶರಣ–ಶರಣೆಯರನ್ನು ದೇವ–ದೇವತೆಗಳನ್ನಾಗಿಸಿದ್ದಾರೆ. ಅಲ್ಲದೇ ಕೆಲವರ ಹೆಸರಿನಲ್ಲಿ ಹಬ್ಬ ಹರಿದಿನ, ಜಾತ್ರೆ ಉತ್ಸವ ತೇರುಗಳನ್ನು ಮಾಡುತ್ತಾರೆ. ಸತಿಯ ಪತಿಯ ನೆರಳಾಗಿರಬೇಕೆಂಬ ಭಾವ ಶರಣೆಯರದಲ್ಲ. ಸತಿ ಪತಿಯೀರ್ವರು ಸಮಾನರು. ಒಬ್ಬರನ್ನೊಬ್ಬರು ಗೌರವಿಸಬೇಕು ಎಂದವರು. ಅದೇ ರೀತಿ ಗೊಗ್ಗವ್ವೆಯ ಒಂದು ವಚನ ಸ್ತ್ರೀವಾದಿ ಚಳುವಳಿಯ ಧೋರಣೆಯನ್ನು ಸಾರುತ್ತದೆ.

'ಗಂಡು ಮೋಹಿಸಿ ಹೆಣ್ಣ ಹಿಡಿದಡೆ, ಅದು ಒಬ್ಬರ ಒಡವೆ ಎಂದು ಅರಿಯಬೇಕು. ಹೆಣ್ಣು ಮೋಹಿಸಿ ಗಂಡ ಹಿಡಿದಡೆ ಉತ್ತರವಾವುದೆಂದರಿಯಬೇಕು. ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ ನಾಸ್ತಿನಾಥನು ಪರಿಪೂರ್ಣನೆಂಬೆ'. ಈ ವಚನದಲ್ಲಿರುವ ಅಂದಿನ ಪ್ರಶ್ನೆಗೆ ಇವತ್ತಿಗೂ ಕೂಡ ಉತ್ತರ ಸಿಕ್ಕಿಲ್ಲ.

ಸಮಾಜದಲ್ಲಿ ಗಂಡು ಹೋಗಿ ಹೆಣ್ಣನ್ನು ಮೆಚ್ಚಿಕೊಂಡು ನಂತರ ಅವಳನ್ನು ಒಂದು ಒಡವೆಯೆಂದು ಪರಿಗಣಿಸಿರುವುದನ್ನು ಕಂಡ ಈ ಶರಣೆ ಹೆಣ್ಣನ್ನು ಒಂದು ಒಡವೆ, ಒಂದು ವಸ್ತು ಎನ್ನುವ ವ್ಯವಸ್ಥೆಗೆ ವೈಚಾರಿಕವಾಗಿ ಪ್ರಶ್ನಿಸಿದ್ದಾಳೆ. ಇದೇ ಕೆಲಸವನ್ನು ಹೆಣ್ಣು ಮಾಡಿದರೆ ಗಂಡು ಅವಳ ಸ್ವತ್ತಾಗಬಹುದೆ? ಎಂದು ಕೇಳುವ ಆಕೆಯಲ್ಲಿ ನಿಜವಾದ ಸ್ತ್ರೀ ಕಾಳಜಿಯಿದೆ. ಹೆಣ್ಣು–ಗಂಡು ಈ ಎರಡರ ಉಭಯವ ಕಳೆಯಬೇಕೆಂದು ಹೇಳುವಲ್ಲಿ ಪರಿಪೂರ್ಣತೆ ಅಡಗಿದೆ ಎಂಬ ಸತ್ಯವನ್ನು ಹೇಳಿದ್ದಾಳೆ. ಇದು ಇಂದಿಗೂ ಪ್ರಸ್ತುತವಾಗಿದೆ. ಇದರರ್ಥವನ್ನೇ ಹೊಂದುವ ಇನ್ನೊಂದು ವಚನ ಇಲ್ಲಿದೆ:–

> ಮೊಲೆ ಮುಡಿ ಬಂದಡೆ ಹೆಣ್ಣೆಂಬರು.
> ಮೀಸೆಕಾಸೆ ಬಂದಡೆ ಗಂಡೆಂಬರು
> ಈ ಉಭಯದ ಜ್ಞಾನ
> ಹೆಣ್ಣೋ ಗಂಡೋ ನಾಸ್ತಿನಾಥಾ?

ವಚನ ಸಾಹಿತ್ಯದ ಇತಿಹಾಸದ ಪುಟಗಳಲ್ಲಿ ಗೊಗ್ಗವ್ವೆಯ ಕುರಿತಾದ ಯಾವ ವಿವರ, ಉಲ್ಲೇಖಗಳು ಸಿಕ್ಕುವುದಿಲ್ಲ. ನಾಲ್ಕು ಸಾಲುಗಳಲ್ಲಿ ಮಾತ್ರ ಅವಳ ಇರುವಿಕೆಯ ಕುರುಹು ಇದೆ. 'ಅಮರಗಣಾಧೀಶ್ವರ ಚರಿತ್ರೆ'ಗಳ ಪುಟದಲ್ಲಿ ಲಭಿಸುವ ವಿವರವೆಂದರೆ, ಈಕೆ ಕೇರಳ ದೇಶದ ಆವಲೂರಿನವಳು, ಹೆತ್ತವರು ಈಕೆಗೆ ಮದುವೆ ಮಾಡಬೇಕೆಂದಾಗ ಈಕೆ ಅದನ್ನು ಇಷ್ಟಪಡದೆ ನಿರಾಕರಿಸಿ ಮನೆಬಿಟ್ಟು ಗೊಗ್ಗಯ್ಯನ ದೇವಸ್ಥಾನದಲ್ಲಿ ಅಡಗಿಕೊಂಡಿರುತ್ತಾಳೆ. ಚೇರಮರಾಯ ಕೈಲಾಸಕ್ಕೆ ಹೋಗುವ ದಾರಿಯನ್ನು ಈಕೆಗೆ ಕೇಳಿದಾಗ ಅವನಿಗೆ ಆತ್ಮಲಿಂಗ ಸ್ವರೂಪವನ್ನು ಉಪದೇಶಿಸಿ ಧೂಪದ ಹೊಗೆಯನ್ನು ಹಾಕಿ, ಆ ಮೂಲಕ ಕೈಲಾಸದ ಮಾರ್ಗವನ್ನು ತೋರಿಸಿದಳಂತೆ.[೩] ಕೇರಳದ ಗ್ರಾಮವೊಂದರಲ್ಲಿ ಜನಿಸಿದ ಗೊಗ್ಗವ್ವೆಗೆ ಕರ್ನಾಟಕದ ಬಸವಕಲ್ಯಾಣದಲ್ಲಿದ್ದ ಶಿವಶರಣರ ವಿಶ್ವಮನುಕುಲ ಚಳುವಳಿಯ ಸುದ್ದಿ ತಲುಪಿ ಅದರಿಂದ ಪ್ರೇರೇಪಿತಳಾಗಿ ತಾನೂ ಆ ಕ್ರಾಂತಿಯಲ್ಲಿ ಸಕ್ರಿಯವಾಗಿ ತನ್ನ ಕೊಡುಗೆಯನ್ನು ನೀಡಬೇಕೆಂದು ಹಾತೊರೆದು ಕಲ್ಯಾಣಕ್ಕೆ ಧಾವಿಸಿದಳು. ಕೊನೆ ಹಂತದಲ್ಲಿ ಕಲ್ಯಾಣಕ್ರಾಂತಿಯ ತರುವಾಯ ಶಿವಶರಣರೆಲ್ಲ ಚದುರಿ ಹೋದ ಸಂಧರ್ಭದಲ್ಲಿ ಗೊಗ್ಗವ್ವೆಯೂ ಕೂಡ ಕಲ್ಯಾಣದಿಂದ ಹೊರಟು ಬೀದರ್ ಜಿಲ್ಲೆ ಅವರಾದ (ಔರಾದ) ತಾಲೂಕಿನ ಧೂಪದ ಮಹಾಗಾಂವ್ ಗ್ರಾಮಕ್ಕೆ ಬಂದು ನೆಲೆಯೂರಿ ತನ್ನ ಕೊನೆ ಕಾಲವನ್ನು ಅಲ್ಲಿಯೇ ಕಳೆದಿರುವ ಸಾಧ್ಯತೆಯಿದೆ. ಹೀಗೆ ಕಲ್ಯಾಣದಿಂದ ಬಂದ ಗೊಗ್ಗವ್ವೆಗೆ ಮಹಾಗಾಂವ್‌ನ ಮಾಲೀಗೌಡರ ಮನೆತನ ಆಶ್ರಯ ನೀಡಿದ್ದು, ಅವಳ ಕಾಯಕ, ದಾಸೋಹ ಕಾರ್ಯಗಳಿಗೆಲ್ಲ ವ್ಯವಸ್ಥೆ ಮಾಡಿಕೊಟ್ಟವರು ಮಾಲೀಗೌಡರ ಮನೆತನದ ಹಿರಿಯರು. ಇಂದಿಗೂ ಆ ಮನೆತನದ ಆರಾಧ್ಯ ದೇವತೆ ಗೊಗ್ಗವ್ವೆ. ಅವಳು ಇಡೀ ಆ ಒಟ್ಟು ಗ್ರಾಮದ ಅಧಿದೇವತೆಯಾಗಿ ಪೂಜಿಸಲ್ಪಡುತ್ತಾಳೆ. ಗೊಗ್ಗವ್ವೆ ಇಲ್ಲಿ ಬಂದು ನೆಲೆಸಿ ಧೂಪದ ಕಾಯಕವನ್ನು ದಿನನಿತ್ಯ ನಿರಂತರವಾಗಿ ನಡೆಸಿಕೊಂಡು ಬಂದಿರುವುದರಿಂದ ಆ ಊರಿಗೆ ಧೂಪದ ಮಹಾಗಾಂವ ಎಂಬ ಹೆಸರು ಬಂದಿರುವುದಾಗಿ ಪ್ರತೀತಿಯೂ ಇದೆ. ಈ ಊರಿನಲ್ಲಿ ಪ್ರಾಚೀನ ದೇವಾಲಯವೊಂದಿದೆ. ಅದು ಮಹಾದೇವನ ಗುಡಿ. ಈ ಗುಡಿಯನ್ನು ಶಿವನಾಥನ ಗುಡಿ ಎಂದು ಜನ ಕರೆಯುತ್ತಾರೆ. ಈ ಗುಡಿಯು ಗೊಗ್ಗವ್ವೆಯ ಆರಾಧ್ಯದೇವರಾಗಿದ್ದ ನಾಸ್ತಿನಾಥನ ನೆನಪಿನಾರ್ಥವಾಗಿ ಕಟ್ಟಿಸಿ ದೇವಸ್ಥಾನವಾಗಿರಬಹುದು. ನಾಸ್ತಿನಾಥ ಎಂಬ ಹೆಸರು ಶಿವನಾಥ ಎಂದಾಗಿ ಜನರು, ಭಕ್ತರು ಅದನ್ನೇ ಮಹಾದೇವನ ಗುಡಿ ಎಂದು ಕರೆದಿರುವ ಸಂಭವವೂ ಇದೆ. ಇದರಂತೆ ಇಲ್ಲಿ ಲಿಂಗೈಕ್ಯಳಾದ ಈ ಶರಣೆ ಗೊಗ್ಗವ್ವೆಯ ಸಮಾಧಿಯೂ ಇದೆ. ಅದರ ಮೇಲೆ ಮಾಲೀಪಾಟೀಲ ಮನೆತನದವರು ಮಂದಿರವೊಂದನ್ನು ಕಟ್ಟಿಸಿದ್ದಾರೆ. ಈ ಮಂದಿರದೊಳಗೆ ಗದ್ದುಗೆಯೊಂದಿದೆ. ಅಲ್ಲಿಗೆ ಬಂದ ಭಕ್ತರು ಈ ಗದ್ದಿಗೆ ಪೀಠಕ್ಕೆ ಪೂಜೆ ಮಾಡುತ್ತಾರೆ. ಅದರ ಕೆಳಗೆ ಆಳವಾದ ಕಂದಕವೊಂದು ಕಂಡು ಬಂದು ಬಹುಶಃ ಅದೊಂದು ಗುಹೆ ಇದ್ದು ಶಿವಶರಣೆಯ ಪಾರ್ಥಿವ ಶರೀರವನ್ನು ಆ ಗುಹೆಯಲ್ಲಿ ಅಂದಿನ ಕಾಲದಲ್ಲಿ ಇಟ್ಟಿರಬಹುದೆಂಬ ನಂಬಿಕೆ ಮಾಲೀಪಾಟೀಲ ಕುಟುಂಬದ ಹಿರಿಯರದ್ದು. ಕಾಲ ಕ್ರಮೇಣ ಅಲ್ಲಿ ಸಮಾಧಿಯನ್ನು ರಚಿಸಿರಬೇಕು. ಮಠಪತಿ ಶಾಂತಯ್ಯನವರ ಕುಟುಂಬಸ್ಥರಿಂದ ಅಲ್ಲಿ ಪೂಜೆ ನೆರವೇರುತ್ತದೆ. ಸಮಾಧಿಯ ಹತ್ತಿರದಲ್ಲಿ ಒಂದು ಕೆರೆ ಇದ್ದು ಅದನ್ನು ಗೊಗ್ಗವ್ವೆಯ ಕೆರೆ ಎಂದು ಕರೆಯಲಾಗುತ್ತದೆ. ಅಲ್ಲಿ ಧೂಪದ ಕುಂಡವೂ ಇದೆ. ಇಂದಿಗೂ ಆ ಗ್ರಾಮದ ಭಕ್ತರು ತಮ್ಮ ಮನೆಯಲ್ಲಿ ಯಾವುದೇ ಶುಭಕಾರ್ಯಗಳು ಜರುಗಿದರೂ ಆರಂಭದಲ್ಲಿ ಗೊಗ್ಗವ್ವೆಯ ಉಡಿ ತುಂಬಿ ಅವಳಿಗೆ ಅರ್ಚನೆ, ನೈವೇದ್ಯ ನೀಡಿ ಅವಳ ಆಶೀರ್ವಾದದಿಂದ ಮತ್ತು ಧೂಪದ ಕುಂಡದಲ್ಲಿ ಧೂಪ ಉರಿಸಿ ತಮ್ಮ ಶುಭ ಕಾರ್ಯಗಳನ್ನು ಕೈಗೊಳ್ಳುತ್ತಾರೆ. ಇಂದಿಗೂ ಕೂಡ ಅಲ್ಲಿ ಪ್ರತಿವರ್ಷ ಧೂಪೋತ್ಸವದ ಕ್ರಿಯೆ ಅವಳ ಕಾಯಕ ಸನ್ಮಾನಕ್ಕೆ ಪ್ರತೀಕವಾಗಿ ನೆರವೇರುತ್ತದೆ. ಪ್ರತಿವರ್ಷ ಗೊಗ್ಗವ್ವೆಯ ಜಾತ್ರೆ ಉತ್ಸವ ನಡೆದು ಮಹಾರಾಷ್ಟ್ರದಿಂದಲೂ ಸಹ ಭಕ್ತರು ಬಂದು ಗೊಗ್ಗವ್ವೆಯ ದರ್ಶನ ಪ್ರಸಾದ ಪಡೆದುಕೊಂಡು ಧನ್ಯರಾಗುತ್ತಾರೆ. ಹೆಣ್ಣುಮಕ್ಕಳಿಗಂತೂ ಗೊಗ್ಗವ್ವೆಯ ಮೇಲೆ ವಿಶೇಷ ಭಕ್ತಿ. ಜನಪದರು ಬೀದರ ಜಿಲ್ಲೆ ಮತ್ತು ಮಹಾರಾಷ್ಟ್ರಗಳಲ್ಲಿ ಗೊಗ್ಗವ್ವೆಯ ಕುರಿತಾಗಿ ಭಜನೆ ಹಾಡುಗಳನ್ನು ಕಟ್ಟಿ ಹಾಡಿರುವುದೂ ಇದೆ. ಗೊಗ್ಗವ್ವೆಯ ಉಪಸ್ಥಿತಿಯಿಲ್ಲದಿದ್ದರೂ ಅವಳ ಚೈತನ್ಯವನ್ನು ಅನುಭವಿಸುವ ಜನಪದರ ಮೇಲೆ ಇವಳ ಮಾರ್ಗದರ್ಶನ ಮತ್ತು ಹಾರೈಕೆ ಇದ್ದೇ ಇದೆ ಎನ್ನಬಹುದು. ಅವಳ ಮೇಲೆ ಕಟ್ಟಿದ ಒಂದು ಜನಪದ ಹಾಡನ್ನು ಇಲ್ಲಿ ಗಮನಿಸೋಣ

ತಾಯಿಯ ಥೇರಿಗೆ ಇಪ್ಪತ್ತೊಂದು ಹಗ್ಗವ ಹಚ್ಚಿ
ಗೊಗ್ಗಮ್ಮ ಏರಾಳೆ ಹೊಸ ಥೇರಾ ಶಿವ ಶಿವಾ
ಗೊಗ್ಗಮ್ಮನ ಕೊಳ್ಳಲ್ಲಿ ಪಾಚತೊಲಿಯ ಚೌಕ
ಮಲ್ಲೀಗಿ ಹೂವ್ವಾ ಮುಡದಾರೆ ಶಿವ ಶಿವಾ
ಮಲ್ಲೀಗಿ ಹುವ್ವಾ ಮುಡದಾರೆ ಮಾತಾಯಿ
ಗೊಗ್ಗಮ್ಮನ ಎದಿಮ್ಯಾಗ ಸರಮಾಲಿ
ಗೊಗ್ಗಮ್ಮನ ಮುಂದ ಧೂಪಾದ ಘಮ ಘಮ
ತುಪ್ಪದ ದೀಪದಾಗ ಮಿನಗ್ಯಾಳೆ ಶಿವ ಶಿವಾ
ಕಾಲುಂಗರ ಮಾಟ ಏನು ಹೇಳಲಿ ತಾಯಿ
ಥೇರಿನ ಮಾಟ ಬಲುಮಾಟ ತಾಯಿ
ಗೊಗ್ಗಮ್ಮ ತಾಯೀಗಿ ತುಪ್ಪದ ಅಭಿಷೇಕು
ಹಾಲ ಹೊಳಿಯಾಗ ಮಿಂದಾಳ ತಾಯಿ[೪]

(ಆಧಾರ: ಡಾ.ಎಸ್.ಎಂ.ಹಿರೇಮಠ, ಶಿವಶರಣೆ ಗೊಗ್ಗವ್ವೆ, ಶಂಶೋಧನಾತ್ಮಕ ಅಧ್ಯಯನ, ನೋಡಿ ಚೈತನ್ಯ ಜಂಗಮ) ಒಟ್ಟಾರೆ ಈ ಶರಣೆ ಕೇರಳ ನಾಡಿನಲ್ಲಿ ಹುಟ್ಟಿ ಕನ್ನಡ ನಾಡಿಗೆ ಬಂದು ನೆಲೆಸಿ ಕೊನೆಗೆ ಕನ್ನಡ ನಾಡಿನ ತುಟ್ಟ ತುದಿಯಲ್ಲಿ ಲೀನವಾಗಿದ್ದು ಅತ್ಯಂತ ಮಹತ್ವದ ವಿಚಾರ.

**ಕೊನೆ ಟಿಪ್ಪಣಿಗಳು**

1. ಇಲ್ಲಿನ ವಚನಗಳನ್ನು ಡಾ. ವೀರಣ್ಣ ರಾಜೂರ ಅವರು ಸಂಪಾದಿಸಿರುವ ಶಿವಶರಣೆಯರ ವಚನ ಸಂಪುಟದಿಂದ ಬಳಸಿಕೊಳ್ಳಲಾಗಿದೆ. ನೋಡಿ– ಚನ್ನಕ್ಕ ಪಾವಟೆ, ವಚನ ಸನ್ನಿಧಿ, ಪು. ೨೫೪
2. ಚನ್ನಕ್ಕ ಪಾವಟೆ, ವಚನ ಸನ್ನಿಧಿ, ಪು. ೨೬೩, ನೋಡಿ– ಕಾವ್ಯಶ್ರೀ ಜಿ., ವಚನಕಾರ್ತಿಯರು ಮತ್ತು ವೈಚಾರಿಕ ಪ್ರಜ್ಞೆ, ಆದಿತ್ಯ ಪ್ರಕಾಶನ, ಚಿತ್ರದುರ್ಗ, ೨೦೧೫
3. ಲಠ್ಠೆ ಎಂ.ಎಸ್., ಚೈತನ್ಯ ಜಂಗಮ, ಪು. ೨೧೧
4. ಹಿರೇಮಠ ಎಂ.ಎಸ್., ಶಿವಶರಣೆ ಗೊಗ್ಗವ್ವೆ, ಸಂಶೋಧನಾ ಅಧ್ಯಯನ